## ಹಾಸನದ 3 ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ

**ಎಸ್.ಸಿ.28/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | : ಲಲಿತಮ್ಮ | ಪಿಡಬ್ಲ್ಯೂ | 1 |
| ತಂದೆಯ/ಗಂಡನ ಹೆಸರು | : ನಾಗೇಶ | ಸಿಡಬ್ಲ್ಯೂ | 1 |
| ವಯಸ್ಸು | : 39 | ದಿನಾಂಕ: | 23-09-2022 |
| ಕಸುಬು | : ಕೂಲಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣವಚನ | |
| ವಾಸ | : ಕಾಚೆಘಟ್ಟ ಗ್ರಾಮ | ಬೋಧಿಸಲಾಯಿತು | |

**ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದಃ- ಅಭಿಯೋಜನೆಯ ಪರವಾಗಿಃ-**

ನನಗೆ ಚಾಸಾ 2 ರಿಂದ 4 ಗೊತ್ತು ಚಾಸಾ 5 ಮತ್ತು 6 ನನ್ನ ತಮ್ಮಂದಿರು. ಆರೋಪಿ ಗೊತ್ತು. ಸಾಕ್ಷಿ ನ್ಯಾದ ಮುಂದಿರುವ ಆರೋಪಿ ನೋಡಿ ಗುರುತಿಸಿರುತ್ತಾರೆ.ನನ್ನ ಪತಿ ನಾಗೇಶ ರವರು ಟ್ರಾಕ್ಟರ್ ಇಟ್ಟುಕೊಂಡು ಕಲ್ಲು ಕಂಬಗಳನ್ನು , ಸೈಜು ಕಲ್ಲು ಗಳನ್ನು ಕೆಂಚನಹಳ್ಳಿ ಬಂಡೆಯಿಂದ ತಂದು ಮಾರಾಟ ಮಾಡುತ್ತಿದ್ದರು. ಆರೋಪಿ ಸದರಿ ಟ್ರಾಕ್ಟರ್ ಗೆ ಚಾಲಕನಾಗಿದ್ದ. ಲೋಡ್ ಮತ್ತು ಆನ್ ಲೋಡ್ ನ್ನು ಚಾಸಾ 2 ರವರು ಮಾಡುತ್ತಿದ್ದರು. 02 ವರ್ಷದ ಹಿಂದೆ ಮ. 3.00 ಗಂಟೆ ಸಮಯದಲ್ಲಿ ಕೆಂಚನಹಳ್ಳಿಗೆ ಆರೋಪಿ , ನನ್ನಪತಿ ಮತ್ತು ಚಾಸಾ 2 ರವರು ಹೋಗಿದ್ದರು. ಸಂಜೆ 7 ಗಂಟೆ ಸಮಯಕ್ಕೆ ಎಲ್ಲರೂ ಲೋಡ್ ಮಾಡಿಕೊಂಡು ಬಂದರು. ಆ ನಂತರ ಸದರಿ ಲೋಡ್ ನ್ನು ದೇವೇಗೌಡನಹಳ್ಳಿ ಗೆ 12.00 ಗಂಟೆಗೆ ಆನ್ ಲೋಡ್ ಮಾಡಲು ಹೋಗೋಣ ಅಷ್ಟರಲ್ಲಿ ಊಟ ಮಾಡಿಕೊಳ್ಳೋಣವೆಂದು ಹೇಳಿ ಆರೋಪಿ ಊಟ ಮಾಡಿಕೊಂಡು ಬರುತ್ತೇನೆಂದು ಹೇಳಿ ಮನೆಗೆ ಹೋದ. ನಂತರ ರಾತ್ರಿ 12 ಗಂಟೆಗೆ ನನ್ನ ಪತಿ ,ಆರೋಪಿ ಮತ್ತು ಚಾಸಾ 2 ರವರು ದೇವೇಗೌಡನಹಳ್ಳಿಗೆ ಹೋದರು. ಆಗ ವಾಪಸ್ 2.00 ಗಂಟೆಗೆ ಆರೋಪಿ ಮತ್ತು ಚಾಸಾ 2 ರವರು ಜೀವಂತವಾಗಿ ಬಂದರು , ನನ್ನ ಪತಿ ಶವವಾಗಿ ಬಂದರು. ಆರೋಪಿ ನನ್ನ ಪತಿ ಸಂಕೇಹಳ್ಳಿ ಪೆಟ್ರೋಲ್ ಬಂಕ್ ಹತ್ತಿರ ಟ್ರಾಕ್ಟರ್ ನಿಂದ ಬಿದ್ದು ಮೃತರಾದರು ಎಂದು ತಿಳಿಸಿದ. ಆಗ ನಾನು ದುಃಖದಲ್ಲಿದ್ದೆ ಬೆಳಿಗ್ಗೆ ನನ್ನ ತಮ್ಮಂದಿರು ಬಂದು ನನ್ನ ಪತಿಯ ಶವವನ್ನು ನೋಡಿದರು ನನ್ನ ಪತಿಯ ಬಲ ಪಕ್ಕೆಯಲ್ಲಿ ಚುಚ್ಚಿನ ಗಾಯವಾಗಿತ್ತು , ಅಕಸ್ಮಾತ್ ನನ್ನ ಪತಿ ಟ್ರಾಕ್ಟರ್ ನಿಂದ ಬಿದ್ದರೆ ಕೈ ಕಾಲುಗಳಿಗೆ ಮತ್ತು ದೇಹದ ಇತರೆ ಭಾಗಗಳಿಗೆ ಪೆಟ್ಟಾಗ ಬೇಕಾಗಿತ್ತು ಆದರೆ ನನ್ನ ಪತಿಯ ಮೈ ಮೇಲೆ ಆ ರೀತಿ ಯಾವುದೇ ಗಾಯಗಳು ಕಂಡು ಬರಲಿಲ್ಲ ಮತ್ತು ತರಚಿದ ಗಾಯಗಳು ಸಹಾ ಆಗಿರಲಿಲ್ಲ ಆ ಕಾರಣ ಅನುಮಾನ ಬಂದು

ಚಾಸಾ 2 ರವರನ್ನು ವಿಚಾರಿಸಿದರು. ಆಗ ಚಾಸಾ 2 ರವರು ಆರೋಪಿ ಮತ್ತು ನನ್ನ ಪತಿ ಹಣದ ವಿಚಾರಕ್ಕೆ ಜಗಳ ಮಾಡುತ್ತಿದ್ದರು ಆಗ ನನ್ನ ಪತಿ ಆರೋಪಿಯ ತಲೆಗೆ ಒಂದು ಏಟು ಹೊಡೆದರು, ಚಾಸಾ 2 ಸಾಹುಕಾರ ಜೊತೆ ಜಗಳ ಮಾಡಬೇಡ ಅಂತ ಹೇಳಿದರು ಸಹಾ ಆರೋಪಿ ಕಬ್ಬಿಣದ ರಾಡು ತೆಗೆದುಕೊಂಡು ನನ್ನ ಪತಿಯ ಬಲ ಪಕ್ಕೆಗೆ ಚುಚ್ಚಿದರು ಅಂತ ತಿಳಿಸಿದ. ಈ ವಿಚಾರವನ್ನು ಚಾಸಾ 2 ರವರು ಬೇರಯವರ ಬಳಿ ಹೇಳಿದರೆ ಅವರನ್ನು ಸಾಯಿಸುತ್ತೇನೆ ಅಂತ ಬೆದರಿಕೆ ಹಾಕಿದ್ದರು ಅಂತ  ಚಾಸಾ 2 ರವರು ನನಗೆ ತಿಳಿಸಿದ್ದರು. ನಂತರ ನಾನು ಪೋ.ರಿಗೆ ದೂರು ನೀಡಿರುತ್ತೇನೆ. ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು ಸಾಕ್ಷಿ ಸಹಿಗೆ ನಿಪಿ 1 ಎ ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ಪತಿಗೆ ಆದ ಗಾಯಗಳಾದ ಬಗ್ಗೆ 06 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ 2 ಎಂದು ಗುರುತಿಸಲಾಯಿತು. ನಾನು ಟ್ರಾಕ್ಟರ್ ನ್ನು ನ್ಯಾ .ದ ಆದೇಶದ ಮೇರೆಗೆ ಪೋ ಠಾಣೆಯಿಂದ ಬಿಡಿಸಿಕೊಂಡಿರುತ್ತೇನೆ. ಆ ಬಗ್ಗೆ ಪೋ.ರು ಮಹಜರ್ ಮಾಡಿದಾಗ ನನ್ನ ಸಹಿ ಪಡೆದಿರುತ್ತೇನೆ. ಸದರಿ ಮಹಜರ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಸಾಕ್ಷಿ ಸಹಿಗೆ ನಿಪಿ 3 ಎ ಎಂದು ಗುರುತಿಸಲಾಯಿತು. ಸಾಕ್ಷಿ ಟ್ರಾಕ್ಟರ್ ಪೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಆರೋಪಿ ತಮ್ಮ ವಕೀಲರು ಕೇಸಿನಿಂದ ನಿವೃತ್ತಿಯಾದ ಕಾರಣ ಬೇರೆ ವಕೀಲರನ್ನು ನೇಮಕ ಮಾಡಿಕೊಳ್ಳುತ್ತೇನೆಂದು ಹೇಳಿ ಸಮಯ ಕೋರಿದ ಕಾರಣ ಸಮಯ ನೀಡಿ ಮುಂದೂಡಲಾಯಿತು.

**(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇದೆ.**

(ರೂಪಾ ಆರ್. ಕುಲಕರ್ಣಿ)

**3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**